# ಏನು ಬಂದ್ಯೋ ಜೀವವೇ ವ್ಯರ್ಥವಾಗಿ

1. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 215.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 135.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1 except two very minor differences which are not considered here.
5. **Note:** Singer has followed these lyrics.
6. **Note:** Ankita is different in both the books. We have considered Ref.2 as standard and taken that Ankita for listing.

ರಾಗ: ಕೇದಾರಗೌಳ ತಾಳ: ಅಟ

ಏನು ಬಂದೆಯೊ ಜೀವವೇ ವ್ಯರ್ಥವಾಗಿ
ಜ್ಞಾನದಿಂದಲಿ ತಿಳಿದು ಪರಗತಿಯನು ಕೂಡು || ಪ ||

ದಾನವ ಮಾಡಲಿಲ್ಲ ಧರ್ಮವ ಮಾಡಲಿಲ್ಲ
ದೀನ ನುಡಿಗಳಿಲ್ಲ ದಾಕ್ಷಿಣ್ಯವಿಲ್ಲ
ಜ್ಞಾನಿ ಜನರಾ ಸಂಗದೊಳಿರಲಿಲ್ಲ
ಮನವು ನಿರ್ಮಲದಿ ಕ್ಷಣವು ಇರಲಿಲ್ಲ || 1 ||

ಸತಿ ಪುರುಷರಾಗಿ ಸಂತೋಷದಿಂದಿರಲಿಲ್ಲ
ಯತಿಯಾಗಿ ತೀರ್ಥಯಾತ್ರೆಯ ಮಾಡಲಿಲ್ಲ
ಶ್ರುತಿ ಪುರಾಣಗಳನ್ನು ಕಿವಿಗೊಟ್ಟು ಕೇಳಲಿಲ್ಲ
ಮೃತಿಕಾಲ ಬಂದು ದಿನ ವ್ಯರ್ಥ ಹೋಯಿತಲ್ಲ || 2 ||

ಉಂಡುಟ್ಟು ಸುಖವಿಲ್ಲ ಕಾಯ ಪರಿಣಾಮವಿಲ್ಲ
ಕೊಂಡು ಕೊಟ್ಟು ಪರಸೇವೆ ಬಿಡಲಿಲ್ಲ
ದಂದುಗ ಸಂಸಾರ ಮಾಯಾಪಾಶಕೊಳಗಾದೆ
ತಂದೆ ಶ್ರೀ ಪುರಂದರ ವಿಠಲನ ನೆನೆ ಕಂಡ್ಯ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಬದುಕಿನಲ್ಲಿ ಯಾವ ಉತ್ತಮಿಕೆಯನ್ನೂ ಸಾಧಿಸದ ಕೊರಗು ಜೀವವನ್ನು ಆಗಾಗ ಕಾಡುವುದುಂಟು. ಸಾರ್ಥಕವಾದ ಜೀವನ ಎಂದರೆ ದಾನ, ಧರ್ಮ, ಶಿಷ್ಟ ಸಂಗ, ಶರೀರ ಸೌಖ್ಯ, ಕೌಟುಂಬಿಕ ಹಿತಗಳಿಂದ ತುಂಬಿದ ಬದುಕು. ಇವುಗಳಿಂದ ಬರಬೇಕಾದದ್ದು ನಿರ್ಮಲವಾದ ಮನಸ್ಸು. ಅನಂತರ ಜ್ಞಾನದಿಂದ ಮೋಕ್ಷ ಸಾಧನೆ ಸುಲಭವಾಗುತ್ತದೆ. ಆದರೆ ಮನುಷ್ಯ ದಾನ ಧರ್ಮಾದಿ ಲೌಕಿಕ ಉಪಕಾರವನ್ನು ಮಾಡುವುದಿಲ್ಲ. ಪರರನ್ನು ಓಲೈಸುವ ಬುದ್ಧಿ ಹೆಚ್ಚಾಗುತ್ತದೆ. ಅತ್ತ ಸ್ವಂತದ ಕೌಟುಂಬಿಕ ಜೀವನದಲ್ಲೂ ಅರಕೆ ಹೆಪ್ಪುಗಟ್ಟಿರುತ್ತದೆ. ಶಾರೀರಿಕ ವ್ಯಾಧಿಗಳು ಆಗಾಗ ಹಿಂಸಿಸುತ್ತವೆ.

**ದುಂದು** = ಅತಿವ್ಯಯ, ಮನ ಬಲ್ಲಂತೆ ಗಡಬಿಡಿ ಎಬ್ಬಿಸುವಿಕೆ

**Classification:** Keerthane
**Ankita:** sri purandara vittala
**Location:** NA
**Category:** Jeevana Sambodhane, Vairagya
**Sub-Category:** jiva, jnana, dAna, dharma, dIna, jana, mana, Nirmala, patni, pati, santosha, muni, shruthi, purana, kivi, marana, vyartha, samsara, maya, vairagya,
**Pravachana:** NA
**Explanation:** NA